(ಗೊಂದಲ)

ಅಧ್ಯಕ್ಷರು : ಸರ್ಕಾರ ತನ್ನ ಉದ್ದೇಶವನ್ನು ಸ್ಪಷ್ಟಪಡಿಸಿದೆ. ಆಡಳಿತಾತ್ಮಕವಾದ ಅನುಕೂಲತೆಗಾಗಿ ಈ ಆದೇಶವನ್ನು ಹೊರಡಿಸಿದ್ದೇವೆ, ಸಾರ್ವಜನಿಕ ಹಿತಕ್ಕೆ ಎಲ್ಲೆಲ್ಲಿ ಧಕ್ಕೆ ಬರುತ್ತದೋ ಅಂತಹ ಎಲ್ಲಾ ಜಾಗದಲ್ಲಿ ನಾವು ಈ ಆಜ್ಞೆಯನ್ನು ಮರು ಪರಿಶೀಲನೆ ಮಾಡುವುದಕ್ಕೆ ಸಿದ್ಧರಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ. ಅವರು ಆಡಳಿತ ನಡೆಸತಕ್ಕವರು, ಅವರು ಹೇಳಿದ ಮಾತನ್ನು ನಾವು ನಂಬಬೇಕಾಗುತ್ತದೆ, ವಿಶ್ವಾಸಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಇದು ಗಮನ ಸೆಳೆಯುವ ಸೂಚನೆಯಾದ್ದರಿಂದ ಇದರ ಬಗ್ಗೆ ಹೆಚ್ಚಿನ ಸ್ಪಷ್ಟೀಕರಣ ಬೇಡ.

(2) ಇಂಜಿನಿಯರ್‌ಗಳ ಮುಷ್ಕರದಿಂದಾಗಿ ರಾಜ್ಯದಲ್ಲಿ ಕಾಮಗಾರಿಗಳು ಸ್ಥಗಿತಗೊಂಡಿರುವುದು.

ಶ್ರೀ ಡಿ.ವಿ. ಸದಾನಂದಗೌಡ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಜನವರಿ 4ನೇ ತಾರೀಖಿನಿಂದ ಇಂಜಿನಿಯರುಗಳು ನಡೆಸಿದ ಮುಷ್ಕರದಿಂದಾಗಿ ರಾಜ್ಯದ ಎಲ್ಲಾ ಕಾಮಗಾರಿಗಳು ಸ್ಥಗಿತಗೊಂಡಿರುವ ಬಗ್ಗೆ ಮಾನ್ಯ ಲೋಕೋಪಯೋಗಿ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಉಮೇಶ್ ವಿ. ಕತ್ತಿ (ಲೋಕೋಪಯೋಗಿ ಸಚಿವರು): ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆ ಹಾಗೂ ನೀರಾವರಿ ಇಲಾಖೆಯ ಇಂಜಿನಿಯರುಗಳು ದಿನಾಂಕ ೦೪-೧೦-೧೯೯೯ ರಿಂದ ೦೬-೧೧-೧೯೯೯ರ ವರೆಗೆ ಮುಷ್ಕರ (೩೪ ದಿನಗಳು) ನಡೆಸಿದ್ದು, ಇಲಾಖೆಯ ಕೆಲಸಗಳು ಭಾಗಶ: ಕುಂಠಿತಗೊಂಡಿದ್ದು. ನಿಗಧಿತ ವೇಳೆಯಲ್ಲಿ ಗುತ್ತಿಗೆ ಕಾಮಗಾರಿಗಳು ಪೂರ್ಣಗೊಳಿಸಬೇಕಿದ್ದು, ಇದನ್ನು ಆದಷ್ಟು ಬೇಗ ಮುಗಿಸಲು ಯೋಜಿಸಿದೆ. ತಡವಾಗಿ ಮುಗಿಯುವ ಕಾಮಗಾರಿಗಳಿಗೆ ಗುತ್ತಿಗೆ ನಿಯಮದಂತೆ ಅವಧಿ ವಿಸ್ತರಣೆ ನೀಡಲಾಗುವುದು. ನಬಾಡ್ ಕಾಮಗಾರಿಗಳನ್ನು ನಿಗಧಿತ ವೇಳೆಯಲ್ಲಿ ಮುಗಿಸಲು ಯಾವ ತೊಂದರೆಯಾಗುವುದಿಲ್ಲ. ರಸ್ತೆ ಮತ್ತು ಕಟ್ಟಡಗಳ ವಾರ್ಷಿಕ ನಿರ್ವಹಣೆಗಳು ನಿಗಧಿತ ವೇಳೆಯಲ್ಲಿ ಮುಗಿಸಲಾಗುವುದು. ಆದಾಗ್ಯೂ ಕಾಮಗಾರಿಗಳನ್ನು ಆದಷ್ಟು ಶೀಘ್ರವಾಗಿ ಮುಗಿಸಲು ಎಲ್ಲಾ ಸಾಧ್ಯವಾದ ಕ್ರಮಗಳನ್ನು ತೆಗೆದು ಕೊಳ್ಳಲಾಗುವುದು.

+ ಶ್ರೀ ಡಿ.ವಿ. ಸದಾನಂದ ಗೌಡ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಬಹಳ ಪ್ರಾಮುಖ್ಯವಾದಂತಹ ವಿಚಾರಗಳನ್ನು ನಾನು ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರಲಿಕ್ಕೆ ಇಚ್ಚೆ ಪಡುತ್ತಿದ್ದೇನೆ. ಕೇವಲ ದೊಡ್ಡ ದೊಡ್ಡ ಕಾಮಗಾರಿಗಳಿಗೆ ಮಾತ್ರ ಮುಷ್ಕರದ ಬಿಸಿ ತಟ್ಟಿಲ್ಲ, ಇವತ್ತು ಸಾಮಾನ್ಯ ಬಡ ಮನುಷ್ಯನಿಗೆ ಆಶ್ರಯ ಯೋಜನೆ ಮನೆಗೆ ಇಂಜಿನಿಯರ್ ಕೊಡಬೇಕಾದಂತಹ ಒಂದು ದೃಢೀಕರಣ, ಬಿಲ್ ಪಾವತಿಗಾಗಿ ಬೇಕಾದಂತಹ ಎಂ. ಬಿ. ಬುಕ್ಕಿನ ಎಂಟ್ರಿ ಮಾಡಿ ಸರ್ಟಿಫಿಕೇಟ್ ಕೊಡುವಂತಹ ವಿಚಾರಗಳು ಇವೆಲ್ಲಕ್ಕೂ ಕೂಡ ತೊಂದರೆಯಾಯಿತು. ಸುಮಾರು ೩೪ ದಿವಸಗಳು ಆದ ಮುಷ್ಕರದಿಂದಾಗಿ ಅವರು ಆ ಕೆಲಸಗಳನ್ನು ಮಾಡಲಿಕ್ಕಾಗಲಿಲ್ಲ. ಅವರಿಗೆ ಬಿಲ್‌ಗಳು ಇನ್ನೂ ಸಿಕ್ಕಲಿಲ್ಲ. ಸರ್ಕಾರದ ಧೋರಣೆಯಿಂದ, ಹಿಂದೆ ಕಂಟ್ರಾಕ್ಟರ್‌ಗಳಿಗೆ ಪೇಮೆಂಟ್ ಬಾಕಿ ಇದ್ದ ಕಾರಣ ಹಲವಾರು ಕಂಟ್ರಾಕ್ಟರ್‌ಗಳು ಕಾಂಟ್ರಾಕ್ಟ್ ಶುರು ಮಾಡುವಾಗಲೇ ಡಿಲೇ ಮಾಡಿದ್ದು ನಮ್ಮ ಗಮನಕ್ಕೆ ಬಂದಿದೆ. ಮೂರನೆಯದಾಗಿ, ಎಸ್ಟಿಮೇಟ್‌ಗಳು ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗುವಂತಹ ಸಂದರ್ಭಗಳಲ್ಲಿ ಕೂಡ ಸಾಕಷ್ಟು ಡಿಲೇಯಾಗಿರುವುದು ನಮ್ಮ ಗಮನಕ್ಕೆ ಬಂದಿದೆ. ಸರ್ಕಾರ ಇಂಜಿನಿಯರ್‌ಗಳು ೩೪

ದಿವಸಗಳಷ್ಟು ದೀರ್ಘಕಾಲ ಮುಷ್ಕರ ನಡೆಸಲು ಬಿಟ್ಟದ್ದೇ ದೊಡ್ಡ ವಿಪರ್ಯಾಸವಾಗಿದೆ. ತಕ್ಷಣ ಸರ್ಕಾರ ಮಧ್ಯೆ ಪ್ರವೇಶಿಸಬೇಕಾಗಿತ್ತು. ಮಳೆಗಾಲ ಹೋದ ಮೇಲೆ ಅಂದರೆ ಪ್ರಾಯಶ: ಜನವರಿಯಿಂದ ಏಪ್ರಿಲ್‌ನೊಳಗೆ ಸಾಧಾರಣವಾಗಿ ಎಲ್ಲಾ ಕಾಮಗಾರಿಗಳು ಮುಗಿಯಬೇಕಾಗಿದೆ. ಆದರೆ ಅದು ಮುಗಿಯದೇ ಡಾಂಬರೀಕರಣ ಇತ್ಯಾದಿ ಬಾಕಿ ವ್ಯವಸ್ಥೆ ಮಾಡಲಿಕ್ಕೆ ಆಗುತ್ತಿಲ್ಲ. ೩ಳಿ ದಿವಸ ಎಂಜಿನಿಯರ್‌ಗಳು ಆ ಕೆಲಸಕ್ಕೆ ಆಟೆಂಡರ್ ಆಗದ ಕಾರಣ ಆ ಎಲ್ಲಾ ಕೆಲಸಗಳು ಪೆಂಡಿಂಗ್ ಉಳಿದಿವೆ. ಈಗ ನಾನು ಕೇಳುವುದೇನೆಂದರೆ, ಈ ಅವಧಿಯನ್ನು ಬೇರೆ ಎಲ್ಲಾ ಇಲಾಖೆಗಳಿಗೆ ಆರ್ಥಿಕ ವರ್ಷವನ್ನಾಗಿ ಮುಂದುವರಿಸಿಕೊಂಡು ಹೋಗಬೇಕೆಂದು ನಾನು ಹೇಳುತ್ತಿಲ್ಲ. ಯಾವುದೇ ಜಿಲ್ಲಾ ಪಂಚಾಯಿತಿ ಇರಬಹುದು, ಲೋಕೋಪಯೋಗಿ ಇಲಾಖೆ ಇರಬಹುದು ಇದಕ್ಕೆ ಸಂಬಂಧಪಟ್ಟ ವಿಚಾರದಲ್ಲಿ ಕನಿಷ್ಟ ಎರಡು ತಿಂಗಳ ಕಾಲ ಅವಧಿಯನ್ನು ವಿಸ್ತರಣೆ ಮಾಡಲೇಬೇಕಾಗುತ್ತದೆ. ಇಲ್ಲದಿದ್ದರೆ ಕಾಮಗಾರಿ ಕೆಲಸ ಕಂಪ್ಲೀಟ್ ಆಗುವುದಿಲ್ಲ. ಸುತ್ತೋಲೆಗಳನ್ನು ತಾವು ತಕ್ಷಣ ಕಳುಹಿಸಬೇಕಾಗುತ್ತದೆ. ಕಾರಣ ಏನೆಂದರೆ ಅದನ್ನು ಮಾಡದಿದ್ದರೆ ಯಾವುದೇ ಕಾಮಗಾರಿ ಆಗುವುದಿಲ್ಲ. ಮೊದಲೇ ಹೊಂಡ ಮುಚ್ಚುವ ಕೆಲಸವನ್ನು ಇಷ್ಟರತನಕ ಮಾಡಲಿಕ್ಕೆ ಆಗಲಿಲ್ಲ. ಸರ್ಕಾರದಿಂದ ಆ ಕೆಲಸ ಮಾಡಲಿಕ್ಕೆ ಆಗಲಿಲ್ಲ. ಸಾಕಷ್ಟು ಕಾಮಗಾರಿಗಳು ಈಗಾಗಲೇ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಹಂತದಲ್ಲಿದ್ದು ಇನ್ನೂ ಕೂಡ ಅದನ್ನು ಟೆಂಡರ್ ಮಾಡಲಿಕ್ಕೆ ಆಗದಿರತಕ್ಕ, ಕೆಲಸವನ್ನು ಶುರುಮಾಡುವುದಕ್ಕೆ ಆಗಲಿಲ್ಲ. ಇಂಜಿನಿಯರ್‌ಗಳು ಮುಷ್ಕರದಿಂದ ಬಂದ ನಂತರ ಯಾವುದೇ ಎಸ್ಟಿಮೇಟ್ ಮತ್ತೊಂದು ಮಾಡಲಿಕ್ಕೆ ಆಗದೇ ಇರತಕ್ಕ ಸಂಗತಿಗಳಾಗಿದೆ. ಅದರಲ್ಲೂ ನಮ್ಮಲ್ಲಿ ವಿಶೇಷವಾಗಿ ಮಳೆ ಬರುವಂತಹ ಪ್ರದೇಶಗಳಾದ ಕೊಡಗು ಇರಬಹುದು, ದಕ್ಷಿಣ ಕನ್ನಡ ಜಿಲ್ಲೆ ಇರಬಹುದು, ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕೇವಲ ಮುರ್ನಾಲ್ಕು ತಿಂಗಳು ಕೆಲಸ ಮಾಡುವುದಕ್ಕೆ ಸಾಧ್ಯ. ಬಾಕಿ ತಿಂಗಳು ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಈ ವರ್ಷ ಏನಾಗಿದೆ ತಾವೇನಾದರೂ ಮಾರ್ಚಿ ಕೊನೆಯ ಹಂತದಲ್ಲಿ ಮಾರ್ಚಿಯೊಳಗೆ ಕೆಲಸವನ್ನು ಮುಗಿಸದಿದ್ದರೆ ದುಡ್ಡು ಲ್ಯಾಪ್ಸ್ ಆಗುತ್ತದೆ. ಹಾಗೆಂದು ಹೇಳಿದರೆ ನಮ್ಮಲ್ಲಿ ಯಾವುದೇ ಕಾಮಗಾರಿ ಕೆಲಸ ಆಗುವುದಕ್ಕೆ ಸಾಧ್ಯವೇ ಇಲ್ಲಾ. ಈವೊಂದು ವಿಚಾರದಲ್ಲಿ ಸರ್ಕಾರ ಸೂಕ್ತ ಪ್ರಯತ್ನಗಳನ್ನು ಮಾಡದಿರುವುದು ತುಂಬ ವಿಷಾದನೀಯ. ತಾವು ಕೊಡುವಂತಹ ದುಡ್ಡು ಕಡಿಮೆ, ಕಂಟ್ರಾಕ್ಟರುಗಳಿಗೆ ದುಡ್ಡು ಕೊಡುವುದಿಲ್ಲ, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗುವುದಿಲ್ಲ, ತಾವು ಕಣ್ಣು ತೆರೆಯಬೇಕು. ಕನಿಷ್ಟ ಎರಡು ತಿಂಗಳುಗಳ ಕಾಲ ಆರ್ಥಿಕ ವರ್ಷವನ್ನು ಮುಂದುವರಿಸಿ ಎಲ್ಲಾ ಕೆಲಸಗಳನ್ನು ಸರ್ಕಾರದ ವತಿಯಿಂದ ಪೂರ್ತಿ ಮಾಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು : ನಾನು ಎಷ್ಟು ಸಲ ಹೇಳಬೇಕು? ಹೊಸಬರಿಗೆ ಹೇಳಬೇಕು ಹಳಬರಿಗೆ ಹೇಳಬೇಕು, ಗಮನ ಸೆಳೆಯುವ ಸೂಚನೆ ಅಂದರೆ, ತಾವೊಂದು ನೋಟೀಸ್ ಕೊಡುತ್ತೀರಿ ಅದನ್ನು ಅಡ್ಮಿಟ್ ಮಾಡಿದ ಮೇಲೆ, ಸದನದಲ್ಲಿ ಇಂತಹ ವಿಷಯ ತೆಗೆದುಕೊಂಡಾಗ, ಇಂತಹ ವಿಷಯದಲ್ಲಿ ಮಾನ್ಯಮಂತ್ರಿಗಳ ಗಮನ ಸೆಳೆಯುತ್ತೇನೆಂದು ತಾವು ಹೇಳಬೇಕು. ಮಂತ್ರಿಗಳು ಒಂದು ಲಿಖಿತ ಹೇಳಿಕೆ ಓದುತ್ತಾರೆ. ಅದು ಆದ ಮೇಲೆ ಅವರ ಹೇಳಿಕೆಯನ್ನು ಆಧರಿಸಿ ಒಂದೆರಡು ಸ್ಪಷ್ಟೀಕರಣ ಕೇಳಬೇಕು ಅವರು ಉತ್ತರಿಸಬೇಕು. ಪ್ರತಿಯೊಂದಕ್ಕೂ ಭಾಷಣ. ನಾನೇನು ಮಾಡಬೇಕು? ನನ್ನ ಸಮಸ್ಯೆ ಏನೆಂದರೆ, ಯಾರಾದರೂ ಪ್ರೊಸಿಡಿಂಗ್ಸನ್ನು ಮೂರನೆಯವರು ನೋಡಿದರೆ ನನಗೆ ರೂಲ್ಸ್ ಗೊತ್ತಿಲ್ಲವೆಂದು ನನ್ನ ಬಗ್ಗೆ ಏನು ತಿಳಿದುಕೊಳ್ಳುತ್ತಾರೆಂದು ನನಗೆ ಭಯ. ನನಗೆ ರೂಲ್ಸ್ ಗೊತ್ತಿದೆ. ಏನೇನೋ ಹೇಳಿ ಟ್ರೈ ಮಾಡುತ್ತೇನೆ ಸರಿ ಮಾಡುವುದಕ್ಕೆ ನೀವು ಯಾರೂ ದಾರಿಗೆ ಬರುವುದಿಲ್ಲ. ಸ್ಪಷ್ಟೀಕರಣ ಕೇಳಬೇಕು.

ಶ್ರೀ ಡಿ.ವಿ. ಸದಾನಂದಗೌಡ : ನಾನು ಏಕೆ ವಿಚಾರಗಳನ್ನು ಪ್ರಸ್ತಾಪ ಮಾಡಿದೆ, ಅದನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆ ಪಡುತ್ತೇನೆ. ಇಲ್ಲಿ ಅವರು ಏನು ಹೇಳಿದ್ದಾರೆ ಅದನ್ನು ಓದಿ ಹೇಳುತ್ತೇನೆ. ನಿಗದಿತ ವೇಳೆಯಲ್ಲಿ ಗುತ್ತಿಗೆ ಕಾಮಗಾರಿಯನ್ನು ಪೂರ್ತಿಗೊಳಿಸಲು ಅದಕ್ಕೆ ಎಸ್ಟಿಮೇಟ್ ಮಾಡಿ ಮುಗಿಸಲು ಯೋಚಿಸಿದೆ. ಸರ್ಕಾರ ಪರಿಶೀಲನೆ ಮಾಡುವುದು ಮತ್ತು ಯೋಚಿಸುವುದು ಬಿಟ್ಟರೆ ಏನು ಮಾಡಿದೆಯೆಂದು ಹೇಳಬೇಕು. ತಾವು ಇದನ್ನು ಸ್ಪಷ್ಟವಾಗಿ ಹೇಳಬೇಕು. ಸರ್ಕಾರದವರು ಹಲವಾರು ಸಂದರ್ಭಗಳಲ್ಲಿ ಆದೇಶ ಕೊಡುತ್ತೀರಿ, ಪರಿಶೀಲನೆ ಮಾಡುತ್ತೇವೆಂದು ಹೇಳಿ ಪ್ರಶ್ನೆಯನ್ನು ಮುಕ್ತಾಯ ಮಾಡುತ್ತೀರಿ, ನಾವು ಇಕ್ಕಟ್ಟಿನಲ್ಲಿ ಸಿಕ್ಕಿಕೊಳ್ಳುತ್ತೇವೆ. ನಾವು ಊರಿನಲ್ಲಿ ಹೋಗಿ ಈ ಕೆಲಸ ಪರಿಶೀಲನೆ ಮಾಡುತ್ತೇವೆಂದು ಹೇಳಿ ಪ್ರಶ್ನೆಯನ್ನು ಮುಕ್ತಾಯ ಮಾಡುತ್ತೀರಿ, ನಾವು ಇಕ್ಕಟ್ಟಿನಲ್ಲಿ ಸಿಕ್ಕಿಕೊಳ್ಳುತ್ತೇವೆ. ನಾವು ಊರಿನಲ್ಲಿ ಹೋಗಿ ಈ ಕೆಲಸ ಪರಿಶೀಲನೆಯ ಹಂತದಲ್ಲಿದೆಯೆಂದು ಹೇಳುವುದಕ್ಕಾಗುತ್ತದೆಯೆ? ನಮ್ಮ ಕೆಲಸಗಳನ್ನು ಮುಂದುವರಿಸಿದ್ದೇವೆಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಲಿ. ಇಷ್ಟು ಅವಧಿಯವರೆಗೆ ಆ ಕೆಲಸ ಪರಿಶೀಲನೆಯ ಹಂತದಲ್ಲಿದೆಯೆಂದು ಹೇಳುವುದಕ್ಕಾಗುತ್ತದೆಯೆ? ನಮ್ಮ ಕೆಲಸಗಳನ್ನು ಮುಂದುವರಿಸಿದ್ದೇವೆಂದು ಮಂತ್ರಿಗಳು ಸ್ಪಷ್ಟವಾಗಿ ಹೇಳಲಿ. ಇಷ್ಟು ಅವಧಿಯವರೆಗೆ ಆ ಕೆಲಸ ಪೂರೈಸುವವರೆಗೆ ಮುಂದುವರಿಸಿದ್ದೇವೆಂದು ಸರ್ಕಾರ ಏಕೆ ಹೇಳುವುದಿಲ್ಲ. ಏಕೆ ಹೇಳುತ್ತಿಲ್ಲ, ಹೇಳಬೇಕಾಗಿತ್ತು. ಏಪ್ರಿಲ್ ಮತ್ತು ಮೇ ಕೊನೆಯವರೆಗೆ ಮುಂದುವರಿಸುವುದಕ್ಕೆ ಅವಕಾಶ ಕೊಡುತ್ತೇವೆಂದು ನಿರ್ದಿಷ್ಟವಾಗಿ ಹೇಳದೆ, ಈ ವಿಚಾರವನ್ನು ನಾವು ಯೋಚಿಸುತ್ತೇವೆಂದರೆ ಆಗುವುದಿಲ್ಲ. ಇಂತಹ ಅವಧಿಯವರೆಗೆ ಮೇ ಎಂದು ಹೇಳಿದರೆ ನಾಳೆ ಪುನ: ಆ ಅವಧಿಯೊಳಗೆ ಮಾಡಬೇಕು. ಅಷ್ಟರೊಳಗೆ ಆಗುವುದಿಲ್ಲವೆಂದರೆ ಅದಕ್ಕೆ ಸ್ಪಷ್ಟೀಕರಣ ಕೊಡಬೇಕು. ಹಣ ಲ್ಯಾಪ್ಸ್ ಆದರೆ ಯಾರೂ ಜವಾಬ್ದಾರರಾಗುತ್ತಾರೆ? ಸರ್ಕಾರ ಹೇಳಲಿ ಸ್ಪಷ್ಟವಾಗಿ, ಇಷ್ಟು ದಿನ ಮುಂದುವರಿಸುತ್ತೇವೆಂದು ಹೇಳಲಿ. ಸರ್ಕಾರ ಏಕೆ ಹೇಳುತ್ತಿಲ್ಲ. ಗೋಡೆಯ ಮೇಲೆ ದೀಪ ಇಟ್ಟಹಾಗೆ ಆಚೆಗೂ ಕಾಣಬೇಕು ಈಚೆಗೂ ಕಾಣಬೇಕು ಗಾಳಿ ಬಂದಾಗ ದೀಪ ನಂದುವಂತಹ ವ್ಯವಸ್ಥೆಯಾದರೆ ಕೆಲಸವಾಗುವಂತಹ ಪ್ರಯೋಜನವಾಗುವುದಿಲ್ಲ. ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಉಮೇಶ್ ವಿ. ಕತ್ತಿ : (ಲೋಕೋಪಯೋಗಿ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಗಮನ ಸೆಳೆದಿದ್ದಾರೆ ಅದಕ್ಕೆ ಆಯವ್ಯಯದಲ್ಲಿ ಹೋದ ಆರ್ಥಿಕ ವರ್ಷದಲ್ಲಿ ನಮಗೆ ಎಷ್ಟು ಹಣವನ್ನು ಒದಗಿಸಲಾಯಿತು ಅಷ್ಟು ಹಣವನ್ನು ಮಾರ್ಚಿಯೊಳಗೆ ಖರ್ಚುಮಾಡಿ ಕೆಲಸಗಳನ್ನು ಮಾಡುವಂತಹ ಕಾರ್ಯಕ್ರಮವನ್ನು ಪೂರ್ತಿ ಮಾಡುತ್ತೇವೆ. ಇದರಲ್ಲಿ ಯಾವುದೇ ರೀತಿಯ ಹಣ ಲ್ಯಾಪ್ಸ್ ಆಗುವ ಸಂಭವವಿಲ್ಲ. ಉಳಿದಂತಹ ಗುತ್ತಿಗೆ ಆಧಾರದ ಮೇಲೆ ಮತ್ತು ಟೆಂಡರ್ ಮೂಲಕ ಏನು ಕೆಲಸ ಕಾರ್ಯಗಳನ್ನು ಕೊಟ್ಟಿದ್ದೇವೆ, ಅವುಗಳನ್ನು ಅವಧಿಯಲ್ಲಿ ಮುಗಿಸಬೇಕು. ಒಂದೂವರೆ ತಿಂಗಳು ನೋಡಿಕೊಂಡು ಅವುಗಳಿಗೆ ಅವಧಿಯಲ್ಲಿ ವಿಸ್ತರಣೆ ಮಾಡುವಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ತಿಳಿಸುತ್ತೇನೆ.

ಶ್ರೀ ಡಿ.ವಿ. ಸದಾನಂದ ಗೌಡ : ಎಷ್ಟು ದಿವಸಗಳಲ್ಲಿ ಮುಗಿಸುತ್ತೀರಿ?

ಶ್ರೀ ಉಮೇಶ್ ಕತ್ತಿ : ಎಷ್ಟು ಅವಧಿಯಲ್ಲಿ ಮುಗಿಸಬೇಕು ಆ ಅವಧಿಯಲ್ಲಿ ಮುಗಿಸಲಿಕ್ಕೆ ಪ್ರಯತ್ನ ಮಾಡುತ್ತೇನೆ. ಆಗದಿದ್ದರೆ ಸಮಯ ಮುಂದುವರಿಸುತ್ತೇವೆಂದು ಹೇಳಿದ್ದೇನೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರು ತಮ್ಮ ಭಾಷಣ ಪ್ರಾರಂಭ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ದಯಮಾಡಿ ನನಗೆ ಹೇಳಿಕೆ ಮಾಡಿಸಬೇಕು ಮತ್ತೆ ನನ್ನನ್ನು ಧರಣಿ ಮಾಡಿಸಬೇಡಿ. ತಮ್ಮಲ್ಲಿ ಕೈಮುಗಿದು ಕೇಳುತ್ತಿದ್ದೇನೆ.

ಅಧ್ಯಕ್ಷರು : ಮಾನ್ಯ ಶಿವಪ್ಪನವರೆ, ತಮ್ಮ ವಿಷಯವನ್ನು ಆಮೇಲೆ ತೆಗೆದುಕೊಳ್ಳುತ್ತೇನೆ. ಕೊನೆಗೆ ತೆಗೆದುಕೊಳ್ಳುತ್ತೇನೆ. ಮೇನ್ ಅಜೆಂಡಾ ಹಿಂದೆ ಹಾಕುತ್ತಿದ್ದೇವೆ.

ಶ್ರೀ ಬಿ.ಬಿ. ಶಿವಪ್ಪ : ಮಾನ್ಯ ಅಧ್ಯಕ್ಷರೆ, ನಾನು ಯಾವ ಸಂದರ್ಭದಲ್ಲೂ ತಮಗೆ ತೊಂದರೆ ಕೊಡುವವನು ಅಲ್ಲ. ಎಲ್ಲೋ ಒಂದು ಸಾರಿ ವಿಚಾರವನ್ನು ಪ್ರಸ್ತಾಪ ಮಾಡಿ ಒಂದೊಂದು ಸಾರಿ ಬರುತ್ತೇನೆ.

ಅಧ್ಯಕ್ಷರು : ನನ್ನ ಸಮಸ್ಯೆ ಏನೆಂದರೆ ನಾವು ಮಾನ್ಯ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯನ್ನು ಸೂಚಿಸತಕ್ಕ ನಿರ್ಣಯ ಏನಿದೆ ಅದು ಮುಖ್ಯವಾದ ವಿಷಯ. ಹಿಂದೆ ಎಲ್ಲಾ ಬಹಳ ಹೆಚ್ಚು ಸಮಯವನ್ನು ಇದಕ್ಕೆ ತೆಗೆದುಕೊಂಡಿದ್ದೇವೆ. ದುರದೃಷ್ಟವಶಾತ್ ನಮ್ಮ ಸನ್ನಿವೇಶದಲ್ಲಿ ಬಹಳ ಸ್ವಲ್ಪ ಸಮಯವನ್ನು ಈ ಚರ್ಚೆಗೆ ನಿಗದಿ ಮಾಡಿದ್ದೇವೆ. ನಮ್ಮ ಉದ್ದೇಶ ಇವತ್ತಾದರೂ ಚರ್ಚೆಯಾಗಲಿ, ತಮ್ಮದು ಆಮೇಲೆ ತೆಗೆದುಕೊಳ್ಳುತ್ತೇನೆ. ದಯಮಾಡಿ ಸಹಕಾರ ಮಾಡಿ. ಅನಂತರ ತೆಗೆದುಕೊಳ್ಳುತ್ತೇನೆ ದಯಮಾಡಿ ಸಹಕರಿಸಿ. ಅಕೌಂಟೆಂಟ್ ಜನರಲ್ ಕಛೇರಿಯ ವಿಚಾರದ ಬಗ್ಗೆ ಸಭಾನಾಯಕರು ಉತ್ತರ ಹೇಳಿ.

6. ಮುಖ್ಯ ಮಂತ್ರಿಗಳವರಿಂದ ಹೇಳಿಕೆ

ವಿಷಯ : ಮಹಾಲೇಖಪಾಲಕರ ಕಛೇರಿಯಲ್ಲಿ ತಮಿಳರ ನೇಮಕಾತಿ ಬಗ್ಗೆ

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ನಾನು ಪತ್ರಿಕೆಯಲ್ಲಿ ಓದಿದ್ದೇನೆ. ತಮಿಳುನಾಡಿನ ಮುಖ್ಯಮಂತ್ರಿಗಳ ಬೇಡಿಕೆಯ ಪ್ರಕಾರ ಪ್ರಧಾನಮಂತ್ರಿಗಳು ತಮಿಳರನ್ನು ಅದೇ ಕಛೇರಿಯಲ್ಲಿ ಇಟ್ಟಿದ್ದಾರೆಂದು. ಅಧಿಕೃತವಾಗಿ ನಮಗೇನೂ ರೆಫರೆನ್ಸ್ ಅಕೌಂಟೆಂಟ್ ಜನರಲ್ ಆಫೀಸಿನಿಂದ ನಮ್ಮ ಮುಖ್ಯಕಾರ್ಯದರ್ಶಿಗಳಿಗೆ ಏನೂ ಇನ್‌ಫರ್ಮೇಷನ್ ಬಂದಿಲ್ಲ. ಕೇಂದ್ರ ಸರ್ಕಾರದ ಕಛೇರಿಯಲ್ಲಿ ಏನು ಹೇಳುತ್ತಾರೆ. ಕನ್ನಡ ಜ್ಞಾನ ಅವಶ್ಯಕತೆಯಿರತಕ್ಕ ಹುದ್ದೆಗಳು ಆದರೆ ತಮಿಳರನ್ನು ಅಕೌಂಟ್ಸ್ ಕನ್ನಡದಲ್ಲಿದ್ದು ಆತನಿಗೆ ಕನ್ನಡ ಭಾರದಿದ್ದರೆ ಆತನನ್ನು ಹೇಗೆ ಅಕೌಂಟ್ಸ್ ಆಫೀಸರ್ ಮಾಡುತ್ತಾರೆ? ತಮಿಳರು ಬೇರೆ ಕೆಲಸಗಳಲ್ಲಿ ರೈಲ್ವೆಯಲ್ಲಿದ್ದಾರೆ, ಪೋಸ್ಟ್ ಅಂಡ್ ಟೆಲಿಗ್ರಾಫ್‌ನಲ್ಲಿದ್ದಾರೆ ಇನ್ನು ಬೇರೆ ಬೇರೆ ಕಡೆಗಳಲ್ಲಿದ್ದಾರೆ. ಅಕೌಂಟೆಂಟ್ ಜನರಲ್ ಆಫೀಸ್‌ದು ನಿಲುವೇನು ಕನ್ನಡದ ನಾಲೆಡ್ಜ್ ಇರತಕ್ಕವರನ್ನು ನೇಮಕ ಮಾಡಬೇಕೆಂದು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಅವರನ್ನು ಎಲ್ಲಿ ಅಬ್ಸಾರ್ಬ್ ಮಾಡಿದ್ದಾರೆನ್ನುವ ಬಗ್ಗೆ ಅವರಿಂದ ಉತ್ತರ ಬಂದಮೇಲೆ ತಮಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಈಗಾಗಲೇ ನಾಲ್ಕು ಜನ ತಮಿಳರ ನೇಮಕವಾಗಿದೆ. ಇದು ಸ್ಪಷ್ಟವಾದ ವಿಚಾರ. ಇಲ್ಲಿ ಪ್ರತಿಭಟನೆಯಾದಾಗ ಆದೇಶವನ್ನು ಹಿಂದಕ್ಕೆ ಪಡೆದಿದ್ದಾರೆ. ಮತ್ತೆ ಅವರನ್ನು ಅಲ್ಲಿಯೇ ಹಾಕಬೇಕೆಂದು ತಮಿಳುನಾಡಿನ ಮುಖ್ಯಮಂತ್ರಿಗಳು ಪ್ರಧಾನಮಂತ್ರಿಗಳಿಗೆ ಪತ್ರ ಬರೆದ ಮೇಲೆ ಪುನ: ನೇಮಕ ಮಾಡಲಾಗಿದೆ. ಇದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ನಿಮ್ಮ ನಿಲುವೇನು ಎಂಬುದನ್ನು ಪ್ರಧಾನ